ಪಿ.ಡಬ್ಲ್ಯು 1

(ದಿನಾಂಕ **29-01-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಫಿರ್ಯಾದಿಯ ಪ್ರಮಾಣೀಕೃತ ಹೇಳಿಕೆ**

ನಾನು ಈ ಪ್ರಕರಣದಲ್ಲಿ ಫಿರ್ಯಾದಿದಾರನಾಗಿದ್ದು, ನನ್ನ ಪ್ರಮಾಣೀಕೃತ ಹೇಳಿಕೆಯ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ. ನಾನು ನನ್ನ ಫಿರ್ಯಾದಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ.

ಫಿರ್ಯಾದಿ ಸಂಸ್ಥೆಯವರು ಪ್ರಕರಣವನ್ನು ನಡೆಸಲು ನೀಡಿರುವ ಅಧಿಕಾರ ಪತ್ರದ ಧೃಡೀಕೃತ ಪ್ರತಿಯನ್ನು ನಿ.ಪಿ.1 ಎಂದು, ಆರೋಪಿಯು ನೀಡಿರುವ ಚೆಕ್‌ನ್ನು ನಿ.ಪಿ.2 ಎಂದು, ಅದರಲ್ಲಿರುವ ಆರೋಪಿಯ ಸಹಿಯನ್ನು ನಿ.ಪಿ.2ಎ ಎಂದು, ಬ್ಯಾಂಕನವರು ನೀಡಿರುವ ಹಿಂಬರಹವನ್ನು ನಿ.ಪಿ.3 ಎಂದು, ದಿನಾಂಕ **10-12-2024** ರಂದು ಆರೋಪಿಗೆ ನೀಡಿರುವ ನೋಟಿಸ್‌ನ ಕಚೇರಿ ಪ್ರತಿಯನ್ನು ನಿ.ಪಿ.4 ಎಂದು, ಆರೋಪಿಗೆ ನೋಟಿಸ್ ನೀಡಿದ ಬಗ್ಗೆ ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.5 ಎಂದು, ಆರೋಪಿಗೆ ನೋಟಿಸ್ ಜಾರಿಯಾದ ಬಗ್ಗೆ Track Consignment ನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ. 6 ಎಂದು, ಸಾಲದ ಅರ್ಜಿಯ ಧೃಡೀಕೃತ ಪ್ರತಿಯನ್ನು ನಿ.ಪಿ.7 ಎಂದು, ಸಾಲದ ಕರಾರಿನ ಧೃಡೀಕೃತ ಪಟ್ಟಿಯನ್ನು ನಿಪಿ 8 ಎಂದು, ಮುದ್ದತ ವಚನ ಪತ್ರದ ಧೃಡೀಕೃತ ಪಟ್ಟಿಯನ್ನು ನಿ.ಪಿ.9 ಎಂದು, ಸಾಲ ಶಿಫಾರಸ್ಸು ಪ್ರತಿದ ಧೃಡೀಕೃತ ಪಟ್ಟಿಯನ್ನು ನಿ.ಪಿ.10 ಎಂದು, Hypothication Agreement ಧೃಡೀಕೃತ ಪಟ್ಟಿಯನ್ನು ನಿ.ಪಿ.11 ಎಂದು, ಡಿಮಾಂಡ ಪ್ರಾಮಿಸರಿ ನೋಟನ ಧೃಡೀಕೃತ ಪ್ರತಿಯನ್ನು ನಿ.ಪಿ.12 ಎಂದು, ಸಾಲದ ಖಾತೆಯ ಉತಾರಿನ ಧೃಡೀಕೃತ ಪ್ರತಿಯನ್ನು ನಿಪಿ 13 ಎಂದು ಗುರುತಿಸಲಾಯಿತು.

(ನಿ.ಪಿ.7 ರಿಂದ 13 ರ ದೃಢೀಕೃತ ಪ್ರತಿಗಳನ್ನು ಮೂಲ ದಾಖಲಾತಿಯೊಂದಿಗೆ ತಾಳೆ ಮಾಡಿ ಪರಿಶೀಲಿಸಿದ ನಂತರದಲ್ಲಿ ಮೂಲ ದಾಖಲಾತಿಗಳನ್ನು ಫಿರ್ಯಾದುದಾರರಿಗೆ ಹಿಂದಿರುಗಿಸಲಾಯಿತು.)

ನನ್ನ ಸಾಕ್ಷಿ ವಿಚಾರಣೆ ಹಾಗೂ ದಾಖಲಾತಿಗಳ ಆಧಾರದ ಮೇಲೆ ಫಿರ್ಯಾದಿಯಲ್ಲಿ ಕೇಳಿರುವಂತೆ ಆದೇಶವಾಗಲು ಪ್ರಾರ್ಥನೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಜೆ. ಎಂ. ಎಫ್. ಸಿ. ಕುಮಟಾ